"ಅಪೂರ್ವ!! ಅಪೂರ್ವ ಅಂದರೆ ನಾನು. ನೀನಲ್ಲ. ನನ್ನ ಹಾಗೆ ಇದ್ದ ಮಾತ್ರಕ್ಕೆ ನೀನು ನಾನಾಗಲು ಸಾಧ್ಯವಿಲ್ಲ. ನಿಜ ಹೇಳು ನೀನ್ಯಾರು?"

"ನಾನು ಅಪೂರ್ವ, ಅಲ್ಲಲ್ಲ ನಾನೂ ಅಪೂರ್ವ."

"ಛೆ! ಹೇಳಿದ್ದನ್ನೇ ಹೇಳಬೇಡ... ಆ ದುಡ್ಡು ಕದ್ದವನು ನೀನೆಯಾ?"

"ಇಲ್ಲ ನಾನು ಕದ್ದಿಲ್ಲ. ನಾನಂಥವನಲ್ಲ."

ಅಪೂರ್ವನಿಗೆ ಈತನೇ ಕಳ್ಳನೆಂಬುದು ಮನದಟ್ಟಾಯಿತು. 'ನಾನು ಯಾವ ದುಡ್ಡಿನ ವಿಚಾರ ಹೇಳುತ್ತಿದ್ದೇನೆಂಬುದನ್ನು ಪ್ರಶ್ನಿಸದೆ ಆ ದುಡ್ಡನ್ನು ಕದ್ದಿಲ್ಲ ಎನ್ನುತ್ತಾನೆ ಎಂದಾದರೆ ಇವನೇ ಕದ್ದದ್ದು ಎಂಬುದು ಸತ್ಯ. ಇವನು ಬಾಯಿ ಮಾತಿಗೆ ಬಗ್ಗುವವನಲ್ಲ. ರಟ್ಟೆ ಹಿಡಿದು ಎಳೆದುಕೊಂಡು ಹೋಗುವುದೇ ಸರಿ' ಎಂದುಕೊಂಡು ಅವನ ರಟ್ಟೆಗೆ ಕೈ ಹಾಕಲು ಹೊರಡುತ್ತಿದ್ದಂತೆ ಆತ ತಪ್ಪಿಸಿಕೊಂಡು ಓಡಲು ಶುರುವಿಟ್ಟುಕೊಂಡ. 'ಎಷ್ಟು ದೂರ ಓಡಿದರೂ ನಿನ್ನ ಇವತ್ತು ಬಿಡುವುದಿಲ್ಲ' ಎಂದುಕೊಳ್ಳುತ್ತ ಆತನ ಹಿಂದೆಯೇ ಓಡಿದ. ಆತ ಓಡುತ್ತ ಮುಂದಕ್ಕೆ ಹೋಗಿ ನಿಂತು ಅಪೂರ್ವನನ್ನು ಕರೆದ... ಆತನಿಗೆ ಹತ್ತಿರವಾಗುತ್ತಿದ್ದಂತೆ ಮತ್ತೆ ಓಡುತ್ತಿದ್ದ.

ಅಪೂರ್ವನಿಗೆ ನಾನೇ ಆತನೋ? ಆತನೇ ನಾನೋ? ಎಂಬ ಶಂಕೆ ಬಹುವಾಗಿ ಕಾಡಿತು. ಆದರೂ ಆತನ ಬೆನ್ನು ಬಿಡದೇ ಓಡಿ ಅವನೊಳಗೆ ಸೇರಿಬಿಟ್ಟ!

★★★

ಹಾಲಿನ ಡೈರಿಯ ಗುಮಾಸ್ತ ತಾನು ದುಡ್ಡನ್ನು ಮರೆತು ಮನೆಯಲ್ಲಿಯೇ ಬಿಟ್ಟು ಬಂದದ್ದು ಮಾರನೆಯ ದಿನ ಅರಿವಿಗೆ ಬರುತ್ತಲೇ ಜನಗಳ ಮಾತು ಕೇಳಿಕೊಂಡು ಏನೂ ತಪ್ಪಿಲ್ಲದ ಅಪೂರ್ವನ ಮೇಲೆ ಅಪವಾದ ಹೊರಿಸಿದ್ದಕ್ಕೆ ಪಶ್ಚಾತಾಪದಿಂದ ಬಳಲಿ ಅಪೂರ್ವನಲ್ಲಿ ಕ್ಷಮೆಯಾಚಿಸಬೇಕೆಂದುಕೊಳ್ಳುತ್ತ ಅಪೂರ್ವನ ಬರುವಿಕೆಗಾಗಿಯೇ ಕಾಯುತ್ತಿದ್ದ.

★★★

ಈ ವರ್ಷ ಚೌತಿಯ ಚಂದ್ರನನ್ನು ನೋಡಿಯೇ ತೀರಬೇಕೆಂದು ಸೂರ್ಯಾಂಶ್ ಮತ್ತು ಪ್ರಭಾತ ತಾವು ಬಾಡಿಗೆಯಲ್ಲಿದ್ದ ಫ್ಲ್ಯಾಟಿನ ಟೆರೇಸಿಗೆ ಬಂದು ನಿಂತು ನೋಡಿಯೇ ನೋಡಿದರು. ಅವರಿಬ್ಬರಿಗೂ ಚಂದಿರನ ಜಾಗದಲ್ಲಿ ನಗುತ್ತಿರುವ ಅಪೂರ್ವನ ಮುಖ ಕಾಣಿಸಿತು.

★★★

ಅಪೂರ್ವನನ್ನು ಸೂರ್ಯಾಂಶ್ ಮತ್ತು ಪ್ರಭಾತ ಅಪಹರಿಸಿ ಕೊಂದಿದ್ದಾರೆಂಬ ಅಪವಾದ ಇಂದಿಗೂ ಇದೆ.


## ವಿಷ್ಣು ಭಟ್ಟ ಹೊಸ್ಮನೆ

ಕತೆಕವನ, ಲಘು ಹಾಸ್ಯದ ಲೇಖನ ಮತ್ತು ಇತರ ಲೇಖನಗಳನ್ನು ಬರೆಯುವುದು, ಓದುವುದು, ಚಿತ್ರ ಬಿಡಿಸುವುದು, ಜೇಡಿಮಣ್ಣಿನಲ್ಲಿ ಕಲಾಕೃತಿಗಳನ್ನು ಮಾಡುವುದು ಲೇಖಕರ ಹವ್ಯಾಸ. ಹುಟ್ಟಿದ ಊರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗುಂಡಿಬೈಲ್ ಎಂಬ ಹಳ್ಳಿ. ಪ್ರಸ್ತುತ ಉಡುಪಿಯ ಆತ್ರಾಡಿ ಗ್ರಾಮದಲ್ಲಿ ವಾಸ.